ವರ್ಗಾಯಿಸುವಂತೆ ಮುಧೋಳ ಪುರಸಭೆಯು ಈಗಾಗಲೇ ಕಂದಾಯ ಇಲಾಖೆಯನ್ನು ಕೋರಿರುತ್ತದೆ. ಈ ಪ್ರಕರಣವು ಪ್ರಸ್ತುತ ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದ್ದು, ಕಂದಾಯ ಇಲಾಖೆಯಿಂದ ಸದರಿ ಜಾಗವು ಪುರಸಭೆಗೆ ವರ್ಗಾವಣೆಗೊಂಡ ಕೂಡಲೇ ಮೇಲ್ಕಂಡ ಕುಟುಂಬಗಳಿಗೆ ಪಟ್ಟಾ ಹಕ್ಕುಪತ್ರ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಈ ಜನಾಂಗದವರು ಕಳೆದ ಮುನ್ನೂರು ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ. ಬಿಜಾಪುರ ರಾಜರಾಗಿದ್ದ ಆದಿಲ್ ಶಾಹಿರವರು ಮುಧೋಳ ಮಹಾರಾಜರಿಗೆ ಮುಧೋಳ ಸಂಸ್ಥಾನವನ್ನು ಉಂಬಳಿಯಾಗಿ ಕೊಟ್ಟ ಸಮಯದಿಂದ ಈ ಜನ ಅಲ್ಲಿದ್ದಾರೆ. ಮುನ್ನೂರು ವರ್ಷಗಳಾದರೂ ಆ ಜನರಿಗೆ ಹಕ್ಕುಪತ್ರಗಳನ್ನು ಕೊಡಲಿಕ್ಕೆ ನಮ್ಮ ಸರ್ಕಾರದಿಂದ ಆಗಲಿಲ್ಲ, ಅದಕ್ಕಾಗಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಈಗಾಗಲೇ ಅಲ್ಲಿ CTS number ಬಿದ್ದಿದೆ. 2004ನಿಂದ 2500ರವರೆಗೆ CTS number ಇವೆ. ಅವರು ಅಲ್ಲಿ ನೂರಾರು ವರ್ಷಗಳಿಂದ ಇದ್ದಾರೆ. ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದಕ್ಕಾಗಿ ದಯಮಾಡಿ ಅವರಿಗೆ ಹಕ್ಕುಪತ್ರ ಕೊಡಲಿಕ್ಕೆ ನಿರ್ದಿಷ್ಟವಾದಂತಹ ಆದೇಶವನ್ನು ಕೊಡಿ. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಅದೀಗ ಉಳಿದಿಲ್ಲ. ಈಗ ಅದು ಸರ್ಕಾರದ ಜಾಗವಾಗಿರುವುದರಿಂದ ಅದು CTS numberಹಾಕಿ ಪುರಸಭೆ ವ್ಯಾಪ್ತಿಗೆ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಎಷ್ಟು ದಿವಸಗಳಲ್ಲಿ ಅವರಿಗೆ ಹಕ್ಕುಪತ್ರಗಳನ್ನು ಕೊಡುತ್ತೀರಿ ಎಂಬುದನ್ನು ದಯಮಾಡಿ ತಾವು ಈ ಸದನಕ್ಕೆ ತಿಳಿಸಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, CTS number ಬಿದ್ದಿದೆ. ಆದರೆ ಇದು ಗ್ರಾಮಠಾಣ ಜಾಗವೂ ಕೂಡ ಇರುತ್ತದೆ. ಈಗಾಗಲೇ ಅಲ್ಲಿರತಕ್ಕಂಥ ಪುರಸಭೆಯವರು AC ಗೆ ಬರೆದಿದ್ದಾರೆ. ನಾನು ಬೆಳಿಗ್ಗೆ ಕೂಡ AC ಯವರೊಂದಿಗೆ ಮಾತನಾಡಿದ್ದೇನೆ. ಇನ್ನು ಎರಡು ತಿಂಗಳೊಳಗಾಗಿ ನಾವು ಪಟ್ಟಾ ಹಕ್ಕುಪತ್ರಗಳನ್ನು ಹಂಚಲು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ. ನಾನು ಜಾಸ್ತಿ ಹೊತ್ತು ತೆಗೆದುಕೊಳ್ಳುವುದಿಲ್ಲ. ಚಾಮರಾಜನಗರದಲ್ಲಿ....

ಅಧ್ಯಕ್ಷರು: ಎಲ್ಲಾ ಮುಗಿದು ಹೋಯಿತಲ್ಲಾ,

ವಿಷಯ: ಚಾಮರಾಜನಗರ ಜಿಲ್ಲಾಧಿಕಾರಿಯವರ ವರ್ಗಾವಣೆ ರದ್ದುಪಡಿಸಿ ಅವರನ್ನು ಅಲ್ಲೇ ಮುಂದುವರೆಸುವ ಕುರಿತು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ, ದಯಮಾಡಿ ಅವಕಾಶ ಮಾಡಿಕೊಡಿ. ಮಧ್ಯೆದಲ್ಲಿ ನಾನು ಏಳಲೂ ಬಾರದು ಹಾಗೂ ಮಾತನಾಡಲೂ ಬಾರದು. ಅದು ನನಗೆ ಅರ್ಥವಾಗುತ್ತದೆ. ಆದರೂ ಪರಿಸ್ಥಿತಿ ಆ ರೀತಿ ಇರುವುದರಿಂದ, ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಚಾಮರಾಜನಗರದಲ್ಲಿ ಇದ್ದಂತಹ ಜಿಲ್ಲಾಧಿಕಾರಿ ಹರ್ಷಕುಮಾರ್ ಗುಪ್ತ ಅನ್ನುವವರನ್ನು ವರ್ಗಾವಣೆ ಮಾಡಲಾಗಿದೆ. ಆ ವರ್ಗಾವಣೆ ಮಾಡಿರುವ ಉದ್ದೇಶ ಸರ್ಕಾರಕ್ಕೆ ಸೇರಿದ್ದು, ವರ್ಗ ಮಾಡುವುದು ಅಥವಾ ಬಿಡುವುದು ಸರ್ಕಾರಕ್ಕೆ ಸೇರಿದ್ದು, ನಾವು ಇಲ್ಲೇನೂ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಬೇಕೆಂದೇನು ಇಲ್ಲ. ಒಳ್ಳೆಯ ಕೆಲಸ ಮಾಡತಕ್ಕಂಥ ಒಬ್ಬ ಅಧಿಕಾರಿ ಎಂದು ಅವರಿಗೆ ಹೆಸರು ಬಂದಿದೆ. ಅವರನ್ನು ಅಲ್ಲೇ ಉಳಿಸಬೇಕು ಎಂದು ಒತ್ತಾಯಿಸಿ ಚಾಮರಾಜನಗರದಲ್ಲಿ ಇವತ್ತು ಬಂದ್ ಮಾಡಿದ್ದಾರೆ. ಜೊತೆಗೆ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸತ್ಯಾಗ್ರಹ ಶುರುವಾಗಿದೆ. ಆದ್ದರಿಂದ, ನಾನು ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಅವರು ಯಾವುದೇ ಕಾರಣದಿಂದ, ಜಿಜ್ಞಾಸೆ ಇಲ್ಲದೆ, ಎಲ್ಲರ ಜೊತೆಗೆ ಹೊಂದಿಕೊಂಡು ಹೋಗಬೇಕೆನ್ನುವಂತಾದ್ದು ನಮ್ಮೆಲ್ಲರ ಅಭಿಪ್ರಾಯ. ಆದ್ದರಿಂದ, ಮಾನ್ಯ ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವಂತಾದ್ದು ಏನೆಂದರೆ, ಆ ವರ್ಗ ಆಗಿರತಕ್ಕಂಥದ್ದನ್ನು ರದ್ದುಪಡಿಸಬೇಕು. ಅವರು ಇಡೀ ಜಿಲ್ಲೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಆ ಕಾರ್ಯಕ್ರಮಗಳನ್ನು ಅವರು ಮುಂದುವರೆಸಲು ಅವಕಾಶವಾಗುವಂತೆ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮೊನ್ನೆ ಹುಬ್ಬಳ್ಳಿ-ಧಾರವಾಡದಲ್ಲಿ ಆಯಿತು, ಅವರು ಚಾಮರಾಜನಗರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆಂದು ಇಡೀ ಊರಿನ ಜನ ಅವರ ಪರವಾಗಿ ನಿಂತಿದ್ದಾರೆ, ಬಂದ್ ಆಚರಿಸಿದ್ದಾರೆ. ಸಾಮಾನ್ಯವಾಗಿ ಅಧಿಕಾರಿಗಳ ವಿರುದ್ಧ ಕೂಗು ಇರುವುದೇ ಜಾಸ್ತಿ ಈ ತರಹ ಅವರ ಪರವಾಗಿ ಬಂದ್ ಆಗಿರಬೇಕಾದರೆ, ಇಡೀ ಜನ ಅವರಿಗೆ ಬೆಂಬಲವಾಗಿ ನಿಂತಿರಬೇಕಾದರೆ, ಆ ತರಹದ ಒಳ್ಳೆಯ ವ್ಯಕ್ತಿಗಳನ್ನು ಏಕೆ ಬೇರೆ ಕಡೆಗೆ ಕಳುಹಿಸಿ ಕೊಡುತ್ತೀರಿ? ಅವರು ಒಳ್ಳೆಯವರೆಂದೇ ನೀವು ಅವರನ್ನು ಬೇರೆ ಜಿಲ್ಲೆಗೆ ಕಳುಹಿಸುತ್ತಿರಬಹುದು. ಆ ಜನ ಅವರು ಅಲ್ಲೇ ಮುಂದುವರೆಯಬೇಕೆಂದು, ಇಡೀ ಊರು ಬಂದ್ ಮಾಡಿದ್ದಾರೆ. ದಯಮಾಡಿ ಅವರನ್ನು ಅಲ್ಲೇ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರು ಮನವಿ ಮಾಡಿದ್ದಾರೆ. ಈ ಬಗ್ಗೆ ಸರ್ಕಾರದ ಕಡೆಯಿಂದ ಏನಾದರೂ ಹೇಳುವುದಿದೆಯೇ?

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ವರ್ಗಾವಣೆಯಂತಹ ಆಡಳಿತಾತ್ಮಕ ವಿಷಯಗಳು ಸದನದಲ್ಲಿ ಚರ್ಚೆಯಾಗಿರತಕ್ಕಂಥದ್ದು ಇಲ್ಲಿಯವರೆಗೂ ಇರಲಿಲ್ಲ. ಆದರೆ, ಈ ಪ್ರಕರಣದಲ್ಲಿ ಅಲ್ಲಿ ಪ್ರತಿಭಟನೆ ನಡೆದಿರುವುದರಿಂದ, ಆ ಕಾರಣಕ್ಕಾಗಿ ಇಲ್ಲಿ ತಮ್ಮ ಒಪ್ಪಿಗೆ ಪಡೆದು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಜಿಲ್ಲಾಧಿಕಾರಿ ಹರ್ಷಗುಪ್ತ ಉತ್ತಮ ಅಧಿಕಾರಿ ಮತ್ತು ದಕ್ಷ ಅಧಿಕಾರಿ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ ವರ್ಗಾವರ್ಗಿಗೆ ಅದೊಂದು ಕಾರಣವಾಗಿರುವುದಿಲ್ಲ. ಅದಕ್ಕೆ ಬೇರೆ ಆಡಳಿತಾತ್ಮಕ ಕಾರಣಗಳೂ ಕೂಡ ಇರುತ್ತವೆ. ಸರ್ಕಾರ ತನ್ನ ವಿವೇಚನೆಯನ್ನು ಉಪಯೋಗಿಸಿಕೊಂಡು, ಆಡಳಿತಾತ್ಮಕವಾದ ಕಾರಣಕ್ಕಾಗಿ ಅವರ ವರ್ಗಾವಣೆಯನ್ನು ಮಾಡಿದೆ. ಇದರ ಬಗ್ಗೆ ಈಗಾಗಲೇ ಮನವಿಯನ್ನು ಮಾನ್ಯ ಶಾಸಕರುಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಅದು ಪರಿಶೀಲನೆಯ ಹಂತದಲ್ಲಿದೆ. ನಂತರ ಆ ಬಗ್ಗೆ ನಾವು ನೋಡುತ್ತೇವೆ. ಸರ್ಕಾರದ ಇಂತಹ ವಿಚಾರಗಳ ಬಗ್ಗೆ ಅನೇಕ ಸಂದರ್ಭಗಳಲ್ಲಿ ಪ್ರತಿಭಟನೆ ಮಾಡತಕ್ಕಂಥದ್ದೂ ಕೂಡ ಇದೆ. ಅದಕ್ಕೆ ಮಾನ್ಯತೆ ಕೊಡಬೇಕೊ ಅಥವಾ ಪ್ರತಿಭಟನೆ ಯಾವ ರೂಪದಲ್ಲಿ ಆಗಿದೆ, ಯಾವ ಕಾರಣಕ್ಕಾಗಿ ಆಗಿದೆ ಅನ್ನತಕ್ಕಂಥ ಮಾಹಿತಿ ನಮ್ಮ ಹತ್ತಿರ ಇಲ್ಲ. ಅವರನ್ನು ಉಳಿಸಿ ಎಂದು ಮನವಿ ಮಾಡಿರತಕ್ಕಂಥದ್ದು ಮಾತ್ರ ನಮಗೆ ಬಂದಿರುವಂತಹ ಮಾಹಿತಿಯಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೂ ಅದನ್ನು ಪರಿಗಣಿಸುತ್ತಾರೆ. ನಂತರ ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ.